ಕರ್ನಾಟಕ ಸರ್ಕಾರ (ಸಿ.ಆರ್.ಪಿ. 67)

| ಹೇಳಿಕೆ ಹಾಳೆ<br>(ಆರ್.ಪಿ. ಸಂಖ್ಯೆ 57)<br>ನಮೂನೆ ಸಂಖ್ಯೆ 4<br>(ಸಿವಿಲ್) |
|---|

ದಿವಾಣಿ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ.ದಂ. ಹಳಿಯಾಳ
ಇವರ ನ್ಯಾಯಾಲಯದಲ್ಲಿ.

ಸಿ.ಸಿ. ನಂ.: 305/2020

.....................................................................

CW 09
PW 06

| | | |
|---|---|---|
| ಹೆಸರು | : | ಮಾರುತಿ ಮಿರಾಶಿ |
| ತಂದೆಯ ಹೆಸರು | : | ಕರಿಯಪ್ಪ |
| ವಯಸ್ಸು | : | 34 ವರ್ಷ |
| ಉದ್ಯೋಗ | : | ಗೌಂಡಿ ಕೆಲಸ |
| ವಾಸಸ್ಥಳ | : | ತಟ್ಟೆಗೇರಾ. |

ದಿನಾಂಕ 06-01-2026 ರಂದು ಸತ್ಯಪ್ರತಿಜ್ಞೆ ಮೇಲೆ ಪ್ರಮಾಣವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ** : ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ :

ಚಾಸಾ 1 ರಿಂದ 8, 10 ಮತ್ತು 11 ರವರು ಪರಿಚಯ ಇದ್ದಾರೆ.

ಸುಮಾರು 5-6 ವರ್ಷಗಳ ಹಿಂದೆ ನನ್ನ ಚಿಕ್ಕಪ್ಪನ ಮಗ ಶಿವಾಜಿ ಮಿರಾಶಿ ಮತ್ತು ಮಂಜುನಾಥ ಮಿರಾಶಿ ರವರಿಗೆ ಕೆಸರೊಳ್ಳಿ ಪೆಟ್ರೋಲ್ ಪಂಪ್ ಹತ್ತಿರ ಅಪಘಾತ ಆಗಿತ್ತು. ಅಪಘಾತ ಮೋಟಾರ ಸೈಕಲ್ ಮತ್ತು ಬಸ್ಸಿನ ನಡುವೆ ಆಗಿತ್ತು ಎಂದು ನಮಗೆ ಫೋನ್ ಮಾಡಿ ತಿಳಿಸಿದರು. ನಂತರ ನಾವು ಹಳಿಯಾಳ ಸರ್ಕಾರಿ ಆಸ್ಪತ್ರೆಗೆ ಬಂದೆವು. ಶಿವಾಜಿ ಮಿರಾಶಿ ಮತ್ತು ಮಂಜುನಾಥ ಮಿರಾಶಿ ರವರಿಗೆ ತಲೆಗೆ ಮತ್ತು ಕಾಲುಗಳಿಗೆ ಪೆಟ್ಟಾಗಿ ಮರಣ ಹೊಂದಿದ್ದರು. ಹೇಗೆ ಅಪಘಾತ ಆಯಿತು ಎಂದು ನಾನು ವಿಚಾರಣೆ ಮಾಡಿಲ್ಲ. ನಾನು ಪೊಲೀಸರಿಗೆ ಯಾವುದೇ ಹೇಳಿಕೆ ನೀಡಿಲ್ಲ.

(ಈ ಹಂತದಲ್ಲಿ ಸಸಅ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಅಂತ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೇಳಿದ್ದರಿಂದ ಸಾಕ್ಷ್ಯ ಹಾಗೂ ಪ್ರಕರಣದ ಇತರ ಅಂಶಗಳನ್ನು ಗಮನಿಸಿ ಪಾಟೀ ಸವಾಲಿಗೆ ಅನುಮತಿ ನೀಡಲಾಯಿತು ).

**ಪಾಟೀ ಸವಾಲು : ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರಿಂದ.**

ದಿನಾಂಕ 24-01-2020 ರಂದು ಪೊಲೀಸರಿಗೆ ಹೇಳಿಕೆ ನೀಡಿ ಅದರಲ್ಲಿ "ದಿನಾಂಕ 24-01-2020 ರಂದು ಮಧ್ಯಾಹ್ನ ನೀವು ಮನೆಯಲ್ಲಿ ಇದ್ದಾಗ ಶಿವಾಜಿ ಮಿರಾಶಿ ಮತ್ತು ಮಂಜುನಾಥ ಮಿರಾಶಿ ರವರಿಗೆ ಕೆಳರೋಳ್ಳಿ ಗೋರೆಖಾನ್ ಪೆಟ್ರೋಲ್ ಪಂಪ್ ಹತ್ತಿರ ಅಪಘಾತ ಆಗಿದೆ ಎಂದು ಮೃತ ಪಟ್ಟಿದ್ದಾರೆ ಎಂದು ತಿಳಿಸಿದರು. ಆಗ ನೀವು ಮತ್ತು ಚಾಸಾ 7 ರವರು ಜಾಗಕ್ಕೆ ಹೋದೆವು, ಆಗ ಶಿವಾಜಿ ಮಿರಾಶಿ ಮತ್ತು ಮಂಜುನಾಥ ಮಿರಾಶಿ ರವರು ಜಾಗದಲ್ಲಿಯೇ ಬಿದ್ದಿದ್ದರು ಎಂದು ನುಡಿದಿರುತ್ತೀರಿ ಎಂದರೆ ಸರಿ. ಚಾಸಾ 1 ರವರಿಗೆ ಅಪಘಾತ ಹೇಗೆ ಆಯಿತು ಎಂದು ಕೇಳಿದಾಗ ಅವರು ಮಧ್ಯಾಹ್ನ 12-00 ಗಂಟೆಗೆ ಹಲಸಿ ಗ್ರಾಮದ ಗೋರೆಖಾನ್ ಪೆಟ್ರೋಲ್ ಪಂಪ್ ಹತ್ತಿರ ತಲುಪಿದಾಗ ಕೆಳರೊಳ್ಳಿ ಕಡಯಿಂದ ಹಳಿಯಾಳ ಕಡೆಗೆ ಕೆ ಎಸ್ ಆರ್ ಟಿ ಸಿ ಬಸ್ ಚಾಲಕ ಅತೀ ವೇಗ ಮತ್ತು ನಿರ್ಲಕ್ಷತನದಿಂದ ಚಲಾಯಿಸಿಕೊಂಡು ರಸ್ತೆಯ ತೀರಾ ಬಲಕ್ಕೆ ಬಂದು ಮುಂದಿನಿಂದ ಹಳಿಯಾಳ ಕಡೆಯಿಂದ ಕಸರೋಳ್ಳಿ ಕಡೆಗೆ ಹೋಗುತ್ತಿದ್ದ ಮೋಟಾರ ಸೈಕಲ್ ಡಿಕ್ಕಿ ಹೊಡೆದು ಅಪಘಾತ ಪಡಿಸಿದರು, ಅಪಘಾತದ ರಭಸಕ್ಕೆ ಮೋಟಾರ ಸೈಕಲ್ ನಲ್ಲಿ ಇದ್ದ ಇಬ್ಬರು ಹುಡುಗರು ಮೋಟಾರ ಸೈಕಲ್ ಸಮೇತ ಸಿಡಿದು ಬಿದ್ದರು, ಮೋಟಾರ ಸೈಕಲ್ ನಿಲ್ಲಿಸಿ ಹತ್ತಿರ ಹೋಗಿ ನೋಡಿದಾಗ ಅಪಘಾತದಲ್ಲಿ ಗಾಯಗೊಂಡವರು ಶಿವಾಜಿ ಮಿರಾಶಿ ಮತ್ತು ಮಂಜುನಾಥ ಮಿರಾಶಿ ರವರು ಎಂದು ಗೊತ್ತಾಯಿತು, ನಂತರ ಅವರಿಬ್ಬರು ಮಾತನಾಡುತ್ತಿರಲಿಲ್ಲ, ಅಪಘಾತವನ್ನು ಕಂಡು ಜಾಗಕ್ಕೆ ಬಂದ ಚಾಸಾ 7 ಮತ್ತು 8 ಹಾಗೂ ನಾನು ಗಾಯಾಳುಗಳನ್ನು ಉಪಚರಿಸಿ ನೋಡಲು ಮೋಟಾರ ಸೈಕಲ್ ಚಲಾಯಿಸುತ್ತಿದ್ದ ಮಂಜುನಾಥನಿಗೆ ತಲೆಗೆ ಮತ್ತು ಬಲಗೈಗೆ ಮತ್ತು ಬಲಗಾಲಿಗೆ ಪೆಟ್ಟಾಗಿ ಜಾಗದಲ್ಲಿಯೇ ಮೃತಪಟ್ಟನು, ಹಿಂದಿಬಯಲ್ಲಿ ಕುಳಿತಿದ್ದ ಶಿವಾಜಿಗೆ ಬಲಗೈಗೆ, ಬಲಗಾಲಿಗೆ ಮತ್ತು ಮುಖಕ್ಕೆ ತಲೆಗೆ ಗಂಭೀರ ಪೆಟ್ಟಾಗಿ ಜಾಗದಲ್ಲಿ ಮೃತಪಟ್ಟಿದ್ದನು, ಮಂಜುನಾಥ ಚಲಾಯಿಸುತ್ತಿದ್ದ ಮೋಟಾರ ಸೈಕಲ್ ಕೆಎ-65-ಇ-6268 ಆಗಿತ್ತು, ಕೆ ಎಸ್ ಆರ್ ಟಿ ಸಿ ಬಸ್ ನಂಬರ ಕೆಎ-42-ಎಫ್-1286 ಆಗಿತ್ತು, ಬಸ್ಸನ್ನು ಆರೋಪಿತ ಚಲಾಯಿಸುತ್ತಿದ್ದ, ಬಸ್ಸ ಹಳಿಯಾಳ ಡಿಪೋದ್ದು ಎಂದು ಗೊತ್ತಾಗಿರುತ್ತದೆ ಅಂತಾ ಚಾಸಾ 1 ರವರು ಹೇಳಿದ ನಂತರ ಗೊತ್ತಾಯಿತು, ನಂತರ ಅವರನ್ನು ಹಳಿಯಾಳ ಸರ್ಕಾರಿ ಆಸ್ಪತ್ರೆಯ ಶವಾಗಾರಕ್ಕೆ ಹಾಕಿದೆವು ಎಂದು ಚಾಸಾ 1 ರವರು ನಿಮಗೆ ತಿಳಿಸಿದರು ಎಂದರೆ ಸರಿ.

ಸಾಕ್ಷಿಗೆ ನಿಪಿ 1 ಅನ್ನು ತೋರಿಸಿ ಅದರಲ್ಲಿ ಕಾಣುವ ಜಾಗದಲ್ಲಿ ಮತ್ತು ಅದರಲ್ಲಿ ಕಾಣುವ ವಾಹನಗಳ ನಡುವೆ ಅಪಘಾತವಾಗಿತ್ತು ಎಂದರೆ ಸರಿ. ಸಾಕ್ಷಿ ನಿಪಿ 1 ರಲ್ಲಿ ತಾವು ಇರುವುದಾಗಿ ನುಡಿಯುತ್ತಾರೆ. ಅಪಘಾತವಾದ ವಿಷಯ ತಿಳಿದ ನಂತರ ಜಾಗಕ್ಕೆ ಹೋಗಿಲ್ಲ, ನೇರವಾಗಿ ಆಸ್ಪತ್ರೆಗೆ ಹೋಗಿದ್ದೇನೆ ಎಂದು ಮುಖ್ಯ ವಿಚಾರಣೆಯಲ್ಲಿ ಸುಳ್ಳು ನುಡಿದಿರುತ್ತೀರಿ ಎಂದರೆ ಸರಿಯಲ್ಲ. ಮುಖ್ಯ ವಿಚಾರಣೆಯಲ್ಲಿ ನಿಪಿ 1 ರಲ್ಲಿ ನೀವು ಇಲ್ಲ ಎಂದು ಮತ್ತು ಅಪಘಾತದ ಬಗ್ಗೆ ಮಾಹಿತಿ ಇಲ್ಲ ಎಂದು ನುಡಿದಿರುತ್ತೀರಿ, ಈಗ ನಿಪಿ 1 ರಲ್ಲಿ ಇರುವುದಾಗಿ ನುಡಿಯುತ್ತೀರಿ

ಯಾವುದು ಸರಿ ಎಂದರೆ ಸಾಕ್ಷಿ ನಿಪಿ 1 ರಲ್ಲಿ ನಾನು ಇರುತ್ತೇನೆ ಎಂದು ನುಡಿಯುತ್ತಾರೆ. ಆ ದಿನ ಕೆ ಎಸ್ ಆರ್ ಟಿ ಸಿ ಬಸ್ ಆರೋಪಿತನೆ ಚಲಾಯಿಸುತ್ತಿದ್ದನು ಎಂದರೆ ಸಾಕ್ಷಿ ನಾನು ನೋಡಿಲ್ಲ ಎನ್ನುತ್ತಾರೆ. ಆರೋಪಿಯನ್ನು ನೋಡಿದ್ದರೂ ಸಹ ನೋಡಿಲ್ಲ ಎಂದು ಸುಳ್ಳು ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ** ಆರೋಪಿತರ ಪರ ವಕೀಲರು ಪಾಟೀ ಸವಾಲು ಇರುವುದಿಲ್ಲ ಎಂದು ತಿಳಿಸಿರುತ್ತಾರೆ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದ ಮೇಲೆ ಗಣಕೀಕರಿಸಿದೆ)

ಓ.ಹೇ.ಕೇ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾ.ದಂ., ಹಳಿಯಾಳ.